ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಆಂಲೆಪ/ಲೆಅ1/ಲೆ.ಪ.29/ನಿವೃತ್ತಿ-2019-20.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:22-10-2018

**ಇವರಿಗೆ:**
ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿ,
ಬೆಂಗಳೂರು/ಮೈಸೂರು/ ಮಂಗಳೂರು/ಶಿವಮೊಗ್ಗ/ಧಾರವಾಡ/ಕಲ್ಬುರ್ಗಿ.

**ಮಾನ್ಯರೇ,**

ವಿಷಯ:-ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ/ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಲಿರುವ ಪ್ರಾಂಶುಪಾಲರು /ಜಂಟಿ ನಿರ್ದೇಶಕರು /ಪ್ರಭಾರ/ ಅನ್ಯಕಾರ್ಯ ನಿಮಿತ್ತ ನಿಯೋಜನೆ ಮೇರೆಗೆ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುವ ಕಾಲೇಜುಗಳು ಮತ್ತು ಅವಧಿಗಳ ಬಗ್ಗೆ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ:-ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ.ಕಾಶಿಇ/253/ಇತರೇ/2017-18/ತವಿ, ದಿ:20-9-2018.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ಸರ್ಕಾರಿ ಕಾನೂನು ಮತ್ತು ಗೃಹ ವಿಜ್ಞಾನ ಕಾಲೇಜುಗಳು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ 2019 & 2020ರಲ್ಲಿ ನಿವೃತ್ತಲಾಗಲಿರುವ ಪ್ರಾಂಶುಪಾಲರುಗಳ ಆಡಳಿತ ಅವಧಿಯ ಲೆಕ್ಕ ತಪಾಸಣೆಯನ್ನು ನಿವೃತ್ತಿಗೊಳ್ಳುವ 06 ತಿಂಗಳು ಮೊದಲೇ ಕೈಗೊಳ್ಳಬೇಕಿರುವುದರಿಂದ ಹಾಗೂ ಈಗಾಗಲೇ ಲೆಕ್ಕ ತಪಾಸಣೆ ಪೂರ್ಣಗೊಂಡು ಜಾರಿಯಾಗಿರುವ ವರದಿಗಳಲ್ಲಿಯ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥಪಡಿಸಲು ಹಾಗೂ ತೀರುವಳಿಯಾಗದೇ ಮುಂದುವರಿಸಲಾದ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳ/ಮೊತ್ತಗಳ ಮೇಲೆ ಕ್ರಮ ಕೈಗೊಳ್ಳಲು ಅಂತಿಮ ವರದಿಯನ್ನು ಉಲ್ಲೇಖಿತ ಪತ್ರದ ಆದೇಶದಂತೆ ಮಾನ್ಯ ಆಯುಕ್ತರಿಗೆ ವರದಿ ಸಲ್ಲಿಸುವ ಅಗತ್ಯವಿರುತ್ತದೆ. ಆದ್ದರಿಂದ ಕಾಲೇಜುಗಳಲ್ಲಿ/ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಅವರ ಸೇವಾವಧಿಯಲ್ಲಿ ಗ್ರೇಡ್-1 & 2 ಪ್ರಾಂಶುಪಾಲರಾಗಿ/ಜಂಟಿ ನಿರ್ದೇಶಕರಾಗಿ ಪ್ರಭಾರ ಪ್ರಾಂಶುಪಾಲರಾಗಿ/ ಅನ್ಯ ಕಾರ್ಯ ನಿಮಿತ್ತ ನಿಯೋಜನೆ

ಮೇರೆಗೆ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುವ ಕಾಲೇಜುಗಳು/ಕಛೇರಿಗಳು ಮತ್ತು ಅವಧಿಯ ಪೂರ್ಣ ವಿವರಗಳನ್ನು ಸಂಬಂಧಪಟ್ಟ ಸಿಬ್ಬಂದಿಗಳಿಂದ ಪಡೆದು ಈ ಕೆಳಕಂಡ ನಮೂನೆಯಲ್ಲಿ ಈ ಪತ್ರ ತಲುಪಿದ ಒಂದು ವಾರದೊಳಗೆ Excel ನಲ್ಲಿ ಭರ್ತಿಮಾಡಿ, ಹಾರ್ಡ್ ಕಾಪಿಯನ್ನು **ಲೆಕ್ಕಾಧಿಕಾರಿಗಳು (ಆಡಿಟ್), ಆಂತರಿಕ ಲೆಕ್ಕ ಪರಿಶೋಧನಾ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ತಾಂತ್ರಿಕ ಶಿಕ್ಷಣ ಭವನ, 2ನೇ ಮಹಡಿ, ಬೆಂಗಳೂರು-560 001** ಇವರಿಗೆ ಹಾಗೂ ಸಾಫ್ಟ್ ಕಾಪಿಯನ್ನು dce.aoaudit@gmail.com ಇ-ಮೇಲ್ ನಲ್ಲಿಯೂ ಸಹ ಕಳುಹಿಸಲು ಸೂಚಿಸಿದೆ.

**ನಮೂನೆ**

| ಕ್ರ ಸಂ | ಬೋಧಕರ ಹೆಸರು ಮತ್ತು ವಿಷಯ | ಪದನಾಮ (ಗ್ರೇಡ್-1 & 2 ಪ್ರಾಂಶುಪಾಲರಾಗಿ/ ಜಂಟಿ ನಿರ್ದೇಶಕರಾಗಿ ಪ್ರಭಾರ ಪ್ರಾಂಶುಪಾಲರಾಗಿ/ ಅನ್ಯ ಕಾರ್ಯ ನಿಮಿತ್ತ ನಿಯೋಜನೆ ಮೇರೆಗೆ ಪ್ರಾಂಶುಪಾಲರಾಗಿ) | ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಈಗಾಗಲೇ ಕರ್ತವ್ಯ ನಿರ್ವಹಿಸಿರುವ ಕಾಲೇಜುಗಳ ವಿವರ | ಕರ್ತವ್ಯ ನಿರ್ವಹಿಸಿದ ಅವಧಿ | ನಿವೃತ್ತಿಯಾಗುವ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

(signature) 9/6/18
ಕಾಲೇಜು ಶಿಕ್ಷಣ ನಿರ್ದೇಶಕರು
(initials)